# 4. ರಕ್ಷಾಬಂಧನ

ಎಚ್.ವ್ಹಿ. ನರಸಿಂಹಮೂರ್ತಿ

ಶ್ರಾವಣ ಶುದ್ಧ ಹುಣ್ಣಿಮೆಯಂದು ಆಚರಿಸುವ 'ರಕ್ಷಾಬಂಧನ' ರಾಖೀಹಬ್ಬವೆಂದೇ ಪ್ರಸಿದ್ಧಿ ಪಡೆದಿದೆ. ಸಮಾಜದ ಸ್ತ್ರೀ-ಪುರುಷರಲ್ಲಿ ಪರಸ್ಪರ ಸೋದರತೆಯ ಪವಿತ್ರ ಸಂಬಂಧವನ್ನು ಮತ್ತಷ್ಟು ಬಲಪಡಿಸುವ ಹಬ್ಬ ಇದು. 'ಸಮಾಜದಲ್ಲಿರುವ ಸ್ತ್ರೀಯರೆಲ್ಲ ತನ್ನ ಅಕ್ಕ-ತಂಗಿಯರು, ಆಪತ್ಕಾಲದಲ್ಲಿ ಅವರ ಮಾನ-ಪ್ರಾಣಗಳನ್ನು ರಕ್ಷಿಸುವುದು ನನ್ನ ಆದ್ಯ ಕರ್ತವ್ಯ. ಈ ಕರ್ತವ್ಯ ನಿರ್ವಹಣೆಯಲ್ಲಿ ಸಂದರ್ಭ ಬಂದರೆ ಪ್ರಾಣ ಕೊಡಲೂ ನಾನು ಸಿದ್ಧ, ಎಂಬ ಪ್ರತಿಜ್ಞೆಯ ಸಂಕೇತ, ಪವಿತ್ರ ರಕ್ಷಾಬಂಧನ.

ರಕ್ಷಾಬಂಧನ ನಮ್ಮ ಜೀವನಯಜ್ಞದ ಕಂಕಣಬಂಧನದ ಹಬ್ಬವೂ ಹೌದು. ರಥೋತ್ಸವ, ಯಜ್ಞ, ಮದುವೆ, ಮುಂಜಿ – ಮೊದಲಾದ ಉತ್ಸವಗಳು ನಿರ್ವಿಘ್ನವಾಗಿ ನಡೆಯಲೆಂದು ಶ್ರೀದೇವರನ್ನು ಪ್ರಾರ್ಥಿಸಿ, ದೀಕ್ಷೆ ತೊಟ್ಟು ಕಂಕಣಕಟ್ಟುವ ಆಚರಣೆ ನಮ್ಮಲ್ಲಿ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ. ನಮ್ಮ ಜೀವನವೂ ಒಂದು ಯಜ್ಞವಷ್ಟೇ. ವರ್ಷದಲ್ಲಿ ಒಂದು ದಿನ ಪವಿತ್ರವಾದ ರಕ್ಷೆಯನ್ನು ಕಂಕಣದಂತೆ ಧರಿಸಿ, ಆ ವರ್ಷವೆಲ್ಲ ನಮ್ಮ ಕಾರ್ಯಗಳು ಆತಂಕವಿಲ್ಲದೆ ನಡೆಯಲಿ; ಜೀವನ ಯಜ್ಞಕ್ಕೆ ದುಷ್ಟಶಕ್ತಿಗಳು ಆತಂಕವೊಡ್ಡದಿರಲಿ – ಎಂದು ಭಗವಂತನನ್ನು ಪ್ರಾರ್ಥಿಸುವ ಪವಿತ್ರ ಆಚರಣೆ ಈ ರಕ್ಷಾಬಂಧನ.

ರಕ್ಷಾಬಂಧನ ಒಂದು ಶಾಸ್ತ್ರೀಯ ಪ್ರಕ್ರಿಯೆ. ಶ್ರಾವಣ ಶುದ್ಧ ಹುಣ್ಣಿಮೆಯ ದಿನ ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು, ಮಂಗಳಸ್ನಾನ-ನಿತ್ಯಕರ್ಮಾದಿಗಳನ್ನು ಪೂರೈಸಿ, ಕಲಶಸ್ಥಾಪನೆ ಮಾಡಬೇಕು. ಹಳದಿ ಬಟ್ಟೆಯಲ್ಲಿ ಸ್ವಲ್ಪ ಕುಂಕುಮ-ಅಕ್ಷತೆಯನ್ನು ಕಟ್ಟಿ ಕಲಶದ ಉತ್ತರ ದಿಕ್ಕಿನಲ್ಲಿ ಇಟ್ಟು, ಅದಕ್ಕೆ ವಾಸುಕೀ ಮೊದಲಾದ ಅಭಿಮಾನಿ ದೇವತೆಗಳನ್ನು ಆವಾಹಿಸಬೇಕು. ಅನಂತರ ಧ್ಯಾನಾವಾಹನಾದಿ ಷೋಡಶೋಪಚಾರ ಮಾಡಿ ಆ ರಕ್ಷೆಯನ್ನು ಯಜಮಾನನು ಮಂತ್ರಪೂರ್ವಕವಾಗಿ ತನ್ನ ಬಲ ಮುಂಗೈಗೆ ಕಟ್ಟಿಕೊಳ್ಳುವುದಲ್ಲದೆ, ಮನೆಮಂದಿಗೆ ಮತ್ತು ತನ್ನ ಆಪ್ತೇಷ್ಟರಿಗೂ ಕಟ್ಟಬೇಕು.

ರಕ್ಷಾಬಂಧನ ಕಾಲದಲ್ಲಿ ಬಳಸುವ ಶ್ಲೋಕ ತುಂಬ ಅರ್ಥಪೂರ್ಣವಾದುದು:

ಯೇನ ಬದ್ಧೋ ಬಲೀ ರಾಜಾ ದಾನವೇಂದ್ರೋ ಮಹಾಬಲಃ ।
ತೇನ ತ್ವಾಂ ಪ್ರತಿಬಧ್ನಾಮಿ ರಕ್ಷೇ ಮಾ ಚಲ ಮಾ ಚಲ ॥

ಅಂದರೆ 'ಬಲಶಾಲಿಯಾದ ರಕ್ಕಸರಾಜ ಬಲಿಯು ಯಾವುದರಿಂದ ಬಂಧಿತನಾದನೋ ಅದರಿಂದ ನಿನ್ನನ್ನು ಕಟ್ಟುತ್ತೇನೆ. ರಕ್ಷೆಯೆ! ನೀನು ಗಟ್ಟಿಯಾಗಿ ನಿಲ್ಲುತ ಜಾರದಿರು' ಎಂದರ್ಥ.

ಸಹೋದರಿಯರು ಅಣ್ಣತಮ್ಮಂದಿರಿಗೆ ರಾಖಿಯನ್ನು ಕಟ್ಟಿ ತಮ್ಮ ಬಾಂಧವ್ಯದ ಮಧುರ ಸ್ಮೃತಿಯನ್ನು ಉಂಟುಮಾಡುತ್ತಾರೆ. ಭಾರತೀಯ ಸಂಸ್ಕೃತಿಯು ತನ್ನ ಸ್ವಂತ ಪತ್ನಿಯ ಹೊರತಾಗಿ ಉಳಿದ ಎಲ್ಲ ಸ್ತ್ರೀಯರನ್ನೂ ಅವರವರ ವಯಸ್ಸಿಗೆ ಅನುಗುಣವಾಗಿ ತಾಯಿ ಅಥವಾ ಅಕ್ಕ, ತಂಗಿಯೆಂದು ಕಾಣಬೇಕೆಂದು ಬೋಧಿಸುತ್ತದೆ. ಬ್ರಹ್ಮಚಾರಿ, ಸನ್ಯಾಸಿ, ಯತಿಗಳಿಗಂತೂ ಎಲ್ಲ ಸ್ತ್ರೀಯರೂ ಜಗನ್ಮಾತೆಯ ರೂಪವೇ. ಆದ್ದರಿಂದ ಮಹಿಳೆಯರು ಪುರುಷರಿಗೆ ಕಳಿಸುವ ರಾಖಿಯು ''ಈ ಪವಿತ್ರ ಭಾವನೆ ನಿಮ್ಮಲ್ಲಿ ಮೂಡಲಿ'' ಎಂಬ ಸಂದೇಶವನ್ನು ನೀಡುತ್ತದೆ. ಪುರುಷರು ಇದನ್ನು ಸ್ವೀಕರಿಸಿ ''ನೀವು ನಮ್ಮ ಸೋದರಿಯರು. ನಿಮ್ಮ ಪ್ರಾಣ-ಮಾನಗಳನ್ನು ರಕ್ಷಿಸುವ ಭಾರವನ್ನು ನಾವು ಹೊರುವೆವು'' ಎಂಬ ಸಾಮಾಜಿಕ ಮಹತ್ವದ ಸಂದೇಶವನ್ನು ರಾಖಿಯ ಮೂಲಕ ಅವರಿಗೆ ಕಳಿಸಬೇಕು.

ರಕ್ಷಾಬಂಧನದ ಕುರಿತು ಅನೇಕ ಐತಿಹಾಸಿಕ ಘಟನೆಗಳನ್ನು ಹೇಳಲಾಗುತ್ತದೆ. ಕೆಲವು ರಾಜರು ಮೊದಲು ಶತ್ರುರಾಜರನ್ನು ಸದೆಬಡಿದು, ಅನಂತರ ಆ ಶತ್ರುರಾಜರ ಹೆಣ್ಣುಮಕ್ಕಳ ಕೈಯಿಂದ ರಾಖಿಯನ್ನು ಕಟ್ಟಿಸಿಕೊಂಡು,

ಹಿಂದಿನ ವೈರವನ್ನೇ ಮರೆತು ಅವರೊಂದಿಗೆ ಸಹಜ ಮಿತ್ರರಾಗುತ್ತಿದ್ದರಂತೆ. ರಾಖಿಯನ್ನು ಕಟ್ಟಿದ ಸಹೋದರಿಗಾಗಿ ಪ್ರಾಣವನ್ನೇ ಅರ್ಪಿಸಿದ ಅನೇಕ ಮುಸಲ್ಮಾನ ರಾಜರ ಕಥೆಗಳು ಪ್ರಚಲಿತದಲ್ಲಿವೆ.

''ಬಂಧನವು ನಮಗೆ ಬೇಡ; ನಾವು ಮುಕ್ತರಾಗೋಣ'' ಎಂಬ ಆಕಾಂಕ್ಷೆಯು ಸಹಜವೇ. ಆದರೆ ರಕ್ಷಾಬಂಧನವು ಇನ್ನೊಬ್ಬರು ನಮ್ಮ ಮೇಲೆ ಹೇರಿದ ಬಂಧನವಲ್ಲ; ದಾಸ್ಯದ ಸಂಕೋಲೆಯೂ ಅಲ್ಲ. ನಮ್ಮ ಧರ್ಮ, ನಮ್ಮ ಪವಿತ್ರ ಮಾತೃಭೂಮಿ ನಮಗೆ ನೀಡಿರುವ ಮಧುರ ಬಾಂಧವ್ಯದ ಸಂಕೇತ ಇದು. ನಮ್ಮ ಧರ್ಮಶಾಸ್ತ್ರಗಳಲ್ಲಿ ಇದರ ವಿಧಿವಿಧಾನವಿದೆ. ಪರಂಪರೆಯಿಂದ ಇದು ನಡೆದು ಬಂದಿದೆ. ಇದನ್ನು ಎಲ್ಲರೂ ಸಂತೋಷದಿಂದ ಸ್ವೀಕರಿಸೋಣ.

### ಶಬ್ದಗಳ ಅರ್ಥ :

**ದಾಸ್ಯ** - ಪಾರತಂತ್ರ್ಯ ; **ಸ್ಮೃತಿ** - ನೆನಪು ; **ಆಪತ್ಕಾಲ** - ಕಷ್ಟಕಾಲ

**ಕೃತಿ 1) ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರಿಸಿರಿ.**

1) 'ರಕ್ಷಾಬಂಧನ'ವು ಯಾವ ಮಾಸದಲ್ಲಿ ಬರುವುದು ?

2) ರಕ್ಷಾಬಂಧನವು ಏನನ್ನು ಬಲಪಡಿಸುತ್ತದೆ ?

3) ಯಾರು ಯಾರಿಗೆ ಸ್ತ್ರೀಯರು ಜಗನ್ಮಾತೆಯ ರೂಪವಾಗಿದ್ದಾರೆ ?

4) ಇಂದು ಮುಸಲ್ಮಾನ ರಾಜರ ಯಾವ ಕಥೆಗಳು ಪ್ರಚಲಿತದಲ್ಲಿವೆ ?

**ಕೃತಿ 2) ಹೊಂದಿಸಿ ಬರೆಯಿರಿ.**

| 'ಅ' | | 'ಬ' |
|---|---|---|
| ರಕ್ಷಾಬಂಧನ | | (ಅ) ಆರತಿ ಬೆಳಗುವುದು |
| ದಸರೆ | | (ಬ) ಬೇವು-ಬೆಲ್ಲ ಸವಿಯುವುದು |
| ಯುಗಾದಿ | | (ಇ) ರಾಖಿ ಕಟ್ಟುವುದು |
| ದೀಪಾವಳಿ | | (ಡ) ಎಳ್ಳು ಬೆಲ್ಲ ಕೊಡುವುದು |
| ಸಂಕ್ರಮಣ | | (ಇ) ಬನ್ನಿ-ಬಂಗಾರ ಕೊಡುವುದು |

**ಕೃತಿ 3) ಕೆಳಗಿನ ವಾಕ್ಯದಲ್ಲಿ ಕರ್ತೃ ಕರ್ಮ, ಕ್ರಿಯಾಪದಗಳನ್ನು ಗುರುತಿಸಿ ಬರೆಯಿರಿ.**

ಬಸವನು ಸುಂದರವಾದ ಚಿತ್ರವನ್ನು ಬಿಡಿಸಿದನು

**ಕೃತಿ 4) ಕೆಳಗಿನ ಶಬ್ದಗಳಲ್ಲಿ ಗೆರೆಹೊಡೆದ ಶಬ್ದದ ವಿರುದ್ಧಾರ್ಥಕ-ಶಬ್ದಗಳನ್ನು ಬಳಸಿ, ಅರ್ಥಕೆಡದಂತೆ ವಾಕ್ಯಗಳನ್ನು ಪುನಃ ಬರೆಯಿರಿ.**

1) ಹರೀಶನು <u>ತಣ್ಣೀರಿನಿಂದ</u> ಸ್ನಾನ ಮಾಡುತ್ತಾನೆ.

2) ಬೆಟ್ಟದ ಬುಡದಲ್ಲಿ <u>ಪುಟ್ಟಕೆರೆ</u> ಇದೆ.

3) ಬಾಳೆಯ ಗಿಡಗಳು ಬಹಳ <u>ಎತ್ತರ</u>ವಾಗಿರುವುದಿಲ್ಲ.

4) ಗಿರಿಜೆಯು <u>ಜಾಣ</u> ಬಾಲಕಿಯಾಗಿದ್ದಾಳೆ.

**ಕೃತಿ 5) ಉದಾಹರಣೆಯಲ್ಲಿ ತೋರಿಸಿದಂತೆ ಕೆಳಗಿನ ಶಬ್ದ ಸಮೂಹಕ್ಕೆ ಒಂದೇ ಶಬ್ದ ಬರೆಯಿರಿ.**

(ಉದಾ - ಮೂರು ಕಣ್ಣು ಉಳ್ಳವನು - ಮುಕ್ಕಣ್ಣ)

1) ಸಾಲತಗೆದು ಕೊಂಡವನು = -----------.

2) ದಿನಾಲು ಬರುವ ಪತ್ರಿಕೆ = ------------ .

3) ಬಳೆ ಮಾರುವವ = ----------------.

4) ಯುದ್ಧ ಮಾಡುವವ = ------------- .

**ಕೃತಿ: 6) ಕೆಳಗಿನವುಗಳಲ್ಲಿ ಉಪಸರ್ಗಯುಕ್ತ ಪದಗಳನ್ನು ಆಯ್ದು ಬರೆಯಿರಿ.**

ಸುಗಂಧ, ಬುದ್ಧಿವಂತ, ಅಪಮಾನ, ಮಾನವಂತ, ಸುವಿಚಾರ, ಸುಜನ, ಅಪಸ್ವರ, ಗುಣವಂತ, ಅವಗುಣ

**ಕೃತಿ 7) ಉದಾಹರಣೆಯಲ್ಲಿ ತೋರಿಸಿದಂತೆ ಶಬ್ದಗಳನ್ನು ಬರೆಯಿರಿ.**

ಉದಾ - ಸಿರಿ - ಸಿರಿತನ

1) --------

2) --------

3) --------

**ಕೃತಿ 8) ಧ್ವನಿ-ದನಿ ಇಂತಹ ತತ್ಸಮ-ತದ್ಭವ ಪದಗಳ ಐದು ಜೋಡಿಗಳನ್ನು ಬರೆಯಿರಿ.**

1) -------- 2) -------- 3) -------- 4) -------- 5) --------

CPD5BV